ಓ ಎಸ್ ನಂ. 30/2015 ಪಿ.ಡಬ್ಲ್ಯೂ 1

ಸಾಕ್ಷಿಯ ಹೆಸರುಃ ಮಹಮದ್ ರಫಿ

ದಿನಾಂಕ 10-03-2022 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಂ ಎ ಐ ವಕೀಲರಿಂದ,

1) ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು ದಾವಾ ಸ್ವತ್ತು ಮೂಲತಹ ಪೇಶ್ವಾನ್ ಮಹಮದ್ ಜಾಫರ್ ರವರಿಗೆ ಸೇರಿರುತ್ತವೆ. ಮೂಲತಹ ದಾವಾ ಸ್ವತ್ತಿನ ಅಳತೆ 80 ಇಂಟು 120 ಅಡಿ ಇತ್ತು. ಪೇಶ್ವಾನ್ ಮಹಮದ್ ಜಾಫರ್ ರವರಿಗೆ ಮೂರು ಜನ ಮಕ್ಕಳು ಇದ್ದರು, ಅವರು ಅಬ್ದುಲ್ ರಹೀಮ್, ಅಬ್ದುಲ್ ರಜಾಕ್ ಮತ್ತು ನಿಸಾರ್ ಅಹಮದ್. ಈ ಮೂರು ಜನ ಮಕ್ಕಳ ಮದ್ಯೆ ದಿಃ 30-07-1937 ರಂದು ನೊಂದಾಯಿತ ವಿಭಾಗ ಪತ್ರವಾಗಿತ್ತು ಎಂದರೆ ಸರಿ ಈ ರೀತಿ ವಿಭಾಗ ಮಾಡಿಕೊಂಡ ನಂತರ ಅವರವರ ಹಿಸ್ಸೆಗೆ ಬಂದ ಸ್ವತ್ತುಗಳನ್ನು ಅವರವರು ಸ್ವಾಧೀನ ಹೊಂದಿ ಅನುಭವಿಸುತ್ತಿದ್ದರು ಎಂದರೆ ಸಾಕ್ಷಿ ಅಬ್ದುಲ್ ರಹೀಮ್ ಮಾತ್ರ ಪ್ರತ್ಯೇಕವಾಗಿ ಸ್ವಾಧೀನ ಪಡೆದಿದ್ದರು ಹಾಗೂ ಉಳಿದ ಇಬ್ಬರು ಜಂಟಿಯಾಗೇ ಇದ್ದರು ಎನ್ನುತ್ತಾರೆ.

2) ಅಬ್ದುಲ್ ರಹೀಂ ರವರು ಅವರಿಗೆ ಬಂದ ಸ್ವತ್ತನ್ನು ಅವರ ಜೀವಿತಾ ಅವಧಿಯಲ್ಲೇ ಮಾರಾಟ ಮಾಡಿದ್ದರು. ಅಬ್ದುಲ್ ರಜಾಕ್ ಮತ್ತು ನಿಸಾರ್ ಅಹಮದ್ ರವರೂ ಕೂಡ ಅವರವರ ಹಿಸ್ಸೆಗೆ ಬಂದ ಸ್ವತ್ತನ್ನು ಪಡೆದು ಅವರವರ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಅಬ್ದುಲ್ ರಜಾಕ್ ರವರು ನನ್ನ ತಾಯಿಯ ತಂದೆ. ಈ ವಿಭಾಗ ಪತ್ರದಲ್ಲಿ ಅಬ್ದುಲ್ ರಜಾಕ್ ಮತ್ತು ನಿಸಾರ್ ಅಹಮದ್ ರವರಿಗೆ ತಲಾ 29 ಇಂಟು 120 ಅಡಿಯ ಸ್ವತ್ತು ಬಂದಿತ್ತು ಎಂದರೆ ಸಾಕ್ಷಿ ಅದು ವಿಭಾಗವಾಗಿರಲಿಲ್ಲ ಹಾಗೂ ಜಂಟಿಯಾಗಿದ್ದು ಅವರು ತೀರಿಕೊಂಡ ನಂತರ ವಿಭಾಗ ಮಾಡಿಕೊಂಡಿರುತ್ತಾರೆ ಎನ್ನುತ್ತಾರೆ.

3) ಅಬ್ದುಲ್ ರಜಾಕ್ ಮತ್ತು ನಿಸಾರ್ ಅಹಮದ್ ರವರ ಮದ್ಯೆ ವೈರತ್ವ ಇದ್ದಿದ್ದರಿಂದ ಅವರವರ ಸ್ವತ್ತನ್ನು ಸ್ವಾಧೀನ ಹೊಂದಿ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸುಳ್ಳು. ನಿಸಾರ್ ಅಹಮದ್ ಹಾಗೂ ಅವರ ಹೆಂಡತಿ 1 ನೇ ಪ್ರತಿವಾದಿ ಜೈಬುನ್ನೀಸಾ ರವರು ವಿಭಾಗ ಪತ್ರದಲ್ಲಿ ಅವರ ಹಿಸ್ಸೆಗೆ ಬಂದ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದರೆ ಸಾಕ್ಷಿ ಅವರು ವಿಭಾಗ ವಾಗಿರಲಿಲ್ಲ, ಅವರು ಈ ಸ್ವತ್ತಿನ ಒಂದು ಭಾಗದಲ್ಲಿ ವಾಸವಾಗಿದ್ದರು ಎನ್ನುತ್ತಾರೆ. ಈ ದಾವೆಯನ್ನು ನಡೆಸಲು ನನ್ನ ತಾಯಿ ನನಗೆ ಜಿಪಿಎ ಬರೆದುಕೊಟ್ಟಿದ್ದರು. ಆದರೆ ನನ್ನ ತಾಯಿ ತೀರಿಕೊಂಡ ನಂತರ

ನಾನೇ ಈ ದಾವೆಯಲ್ಲಿ ಪಕ್ಷಗಾರನಾಗಿರುತ್ತೇನೆ. ಈ ದಾವೆಯಲ್ಲಿ ನಾನು ನನ್ನ ತಾಯಿಯ ಹಿಸ್ಸೆಯನ್ನು ಮಾತ್ರ ಪ್ರತಿನಿಧಿಸುತ್ತಿದ್ದೇನೆ . ನಿಸಾರ್ ಅಹಮದ್ ರವರು ಅವರ ಹಿಸ್ಸೆಗೆ ಬಂದ ಸ್ವತ್ತನ್ನು ಮೊದಲು 1980 ರಲ್ಲಿ ಮೌಖಿಕ ವಾಗಿ ನಂತರ ದಿಃ 10-02-1989 ರಲ್ಲಿ ದಾನ ಪತ್ರದ ಮೂಲಕ 29 ಇಂಟು 100 ಅಡಿ ಸ್ವತ್ತನ್ನು ಅವರ ಹೆಂಡತಿ ಜೈಬುನ್ನೀಸಾ ರವರಿಗೆ ದಾನ ಮಾಡಿರುತ್ತಾರೆ ಎಂದರೆ ಸುಳ್ಳು.

4) ಈ ದಾನ ಪತ್ರದ ಮೂಲಕ 1992 ರಲ್ಲಿ ಜೈಬುನ್ನೀಸಾ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿದ್ದರು ಎಂದರೆ ಸುಳ್ಳು. ನನ್ನ ಅಜ್ಜ ಅಬ್ದುಲ್ ರಜಾಕ್ ರವರಿಗೆ ಐದು ಜನ ಮಕ್ಕಳು. ಅವರಲ್ಲಿ ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ಒಬ್ಬ ಗಂಡು ಮಗ ಇದ್ದರು. ಈ ಗಂಡು ಮಗನ ಹೆಸರು ವಜೀರ್ ಅಹಮದ್. ಅವರು ಕೂಡ ತೀರಿಕೊಂಡಿರುತ್ತಾರೆ. ಅಬ್ದುಲ್ ರಜಾಕ್ ತೀರಿಕೊಂಡ ನಂತರ ಅವರ ಮಗ ವಜೀರ್ ಅಹಮದ್ ರವರಿಗೆ ಅವರ ಹಿಸ್ಸೆಗೆ ಬಂದ ಸ್ವತ್ತು ಖಾತಾ ಆಗಿತ್ತು ಎಂದರೆ ಸರಿ. ವಜೀರ್ ಅಹಮದ್ ರವರು ಅವರ ಜೀವಿತಾ ಕಾಲದಲ್ಲಿ ಈ ಸ್ವತ್ತನ್ನು ಅವರ ಮಗನಿಗೆ ದಾನ ಮಾಡಿದ್ದರು ಎಂದರೆ ಸಾಕ್ಷಿ ಅವರು ಅವರ ಇಬ್ಬರು ಸಹೋದರಿಯೊಂದಿಗೆ ವಿಭಾಗ ಮಾಡಿಕೊಂಡಿದ್ದರು ಎನ್ನುತ್ತಾರೆ. ವಜೀರ್ ಅಹಮದ್ ರವರು ಅವರ ತಂದೆಯಿಂದ ಬಂದ ಸ್ವತ್ತಿನಲ್ಲಿ ಅವರ ಮಕ್ಕಳಿಗೆ ಯಾವುದೇ ಹಿಸ್ಸೆ ನೀಡಿರಲಿಲ್ಲ ಎಂದರೆ ಸರಿ.

5) ನನ್ನ ತಾತ ಅಬ್ದುಲ್ ರಜಾಕ್ ನಾನು ಹುಟ್ಟುವ ಮುಂಚೆಯೇ ತೀರಿಕೊಂಡಿದ್ದರು. 1937 ರಲ್ಲಿ ಮಾಡಿಕೊಂಡ ವಿಭಾಗ ಪತ್ರದಂತೆ ಅಬ್ದುಲ್ ರಹೀಂ ಮತ್ತು ಅಬ್ದುಲ್ ರಜಾಕ್ ರವರು ಅವರ ಪಾಲಿಗೆ ಬಂದ ಸ್ವತ್ತನ್ನು ಅವರ ಹಿಸ್ಸೆಗೆ ಪಡೆದಿದ್ದರು ಎಂದರೆ ಸಾಕ್ಷಿ ಅವರು ವಿಭಾಗವಾಗಿರಲಿಲ್ಲ ಎನ್ನುತ್ತಾರೆ. ವಜೀರ್ ಅಹಮದ್ ರವರಿಗೆ 40 ಇಂಟು 100 ಅಡಿ ಸ್ವತ್ತು ಅವರ ಹಿಸ್ಸೆಗೆ ಬಂದಿರುತ್ತದೆ.

ಈ ಹಂತದಲ್ಲಿ ನ್ಯಾಯಾಲಯದ ಅವಧಿ ಮುಗಿದಿದ್ದರಿಂದ ಹಾಗೂ ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲಿಗೆ ಸಮಯ ನೀಡಿ ಮುಂದೂಡಲಾಯಿತು.

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ.ಕೇ.ಸ.ಇ.ಒ.,

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.